ESI.A.No.25/2022

AW-1,

ದಿನಾಂಕಃ 11-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃ ಶ್ರೀ.SWK ವಕೀಲರಿಂದ

ಅರ್ಜಿದಾರ ಸಂಸ್ಥೆಯನ್ನು 2016 ರಲ್ಲಿ ಆರಂಭಿಸಿದ್ದೇನೆ. ಆದರೆ ದಿನಾಂಕ ನೆನಪಿಲ್ಲ. ಆ ಸಂಸ್ಥೆಯನ್ನು ಆರಂಭಿಸಲು ಇ ಎಸ್ ಐ ಕೋಡನ್ನು ಪಡೆಯುವಾಗ 10 ಜನ ಕಾರ್ಮಿಕರು ಇದ್ದಾರೆ ಎಂದು ನಾನೇ ಸ್ವತಃ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಫ್ಯಾಕ್ಟರಿಗಾಗಿ ಮ್ಯಾನ್ ಪೌವರ್ ಸಪ್ಲೈ ಉದ್ದೇಶದಿಂದ ಅದನ್ನು ಆರಂಭಿಸಿದ್ದೆ ಆದರೆ ಎಲ್ಲೂ ಕೆಲಸ ಸಿಗಲಿಲ್ಲ. ನಾನು ಅರ್ಜಿದಾರ ಸಂಸ್ಥೆಯನ್ನು ಆರಂಭಿಸಲು ವಿವಿಧ ಇಲಾಖೆಗಳಿಂದ ಲೈಸನ್ಸ್ ಪಡೆದುಕೊಂಡಿದ್ದೆ ಎಂದರೆ ನಿಜ. ನನ್ನ ಸಂಸ್ಥೆ 2016 ರಲ್ಲಿ ಮುಚ್ಚಲ್ಪಟ್ಟಿರುತ್ತದೆ ಎಂದು ಲೇಬರ್ ಆಫೀಸಿಗೆ ಹಾಗೂ ಇನ್ನೊಂದು ಆಫೀಸಿಗೆ ತಿಳಿಸಿದ್ದೆನು. 2016 ರಲ್ಲೇ ಇ ಎಸ್ ಐ ಸಂಸ್ಥೆಗೂ ಕೂಡ ನಮ್ಮ ಸಂಸ್ಥೆ ಮುಚ್ಚಿಹೋದ ಬಗ್ಗೆ ತಿಳಿಸಲು ನನಗೆ ಗೊತ್ತಾಗಲಿಲ್ಲ. ದಿನಾಂಕಃ1-2-2016 ರಿಂದ 31-12-2016 ರವರೆಗೆ ನಾನು ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು 30-1-2017 ರಂದು ನನಗೆ ಸಿ-18 ನೋಟೀಸ್ ಬಂತು ಎಂದರೆ ನಿಜ. ಆ ನೋಟೀಸಿನಲ್ಲಿ ರೂ.1,17,975-00 ಗಳನ್ನು ಪಾವತಿ ಮಾಡಬೇಕೆಂದು ತಿಳಿಸಿದ್ದರು ಎಂದರೆ ನಿಜ. ದಿಃ22-2-2017 ರಂದು ಖುದ್ದು ಸುನಾವಣೆಗೆ ಹಾಜರಾಗಬೇಕೆಂದು ಹಾಗೂ ಅಕೌಂಟ್ ಬುಕ್ , ಲೆಡ್ಜರ್, ಕ್ಯಾಷ್ ಬುಕ್, ಬಿಲ್ಸ್ ವೋಚರ್ಸ ಮತ್ತು ಪ್ರಾಫಿಟ್ ಅಂಡ್ ಲಾಸ್ ಅಕೌಂಟನ್ನು ಹಾಜರುಪಡಿಸಬೇಕೆಂದು ತಿಳಿಸಿದ್ದರು ಎಂದರೆ ನನಗೆ ಗೊತ್ತಾಗಲಿಲ್ಲ. ಆ ದಿನ ನಾನು ಹಾಜರಾಗಿಲ್ಲ ಎಂಬ ಕಾರಣಕ್ಕೆ ನನಗೆ 13-3-2017 ರಂದು ಹಾಜರಾಗುವಂತೆ ಇನ್ನೊಂದು ನೋಟೀಸನ್ನು ಕೊಟ್ಟರು ಎಂದರೆ ನಿಜ. ಈ ಎರಡೂ ಸುನಾವಣೆಗಳಿಗೆ ನಾನು ಹಾಜರಾಗಿಲ್ಲ ಎಂಬ ಕಾರಣದಿಂದ ದಿಃ20-3-2017 ರಂದು ರೂ.1,17,975-00 ಗಳನ್ನು ಪಾವತಿಸಬೇಕೆಂದು ಆದೇಶ ಮಾಡಿದರು ಎಂದರೆ ನನಗೆ ಗೊತ್ತಿಲ್ಲ. 1-1-2017 ರಿಂದ 31-7-2018 ರವರೆಗೆ ಇ ಎಸ್ ಐ ವಂತಿಗೆಯನ್ನು ಪಾವತಿ ಮಾಡಿಲ್ಲ ಎಂದು 11-9-2018 ರಂದು ನನಗೆ ಸಿ-18 ನೋಟೀಸ್ ಬಂದಿತ್ತು ಎಂದರೆ ಸಾಕ್ಷಿಯು ತಡವಾಗಿ ಸಿಕ್ಕಿತ್ತು ಎಂದು ನುಡಿಯುತ್ತಾರೆ. ಆ ನೋಟೀಸಿನಲ್ಲಿ ರೂ.2,85,285-00 ಗಳನ್ನು ಪಾವತಿಸಬೇಕೆಂದು ತಿಳಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ದಿಃ10-10-2018 ರಂದು ಖುದ್ದು ಸುನಾವಣೆಗೆ ಹಾಜರಾಗಿ ಎಂದು ನನಗೆ ನೋಟೀಸ್ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಆನಂತರ 30-10-2018 ರಂದು ಸುನಾವಣೆಗೆ ಹಾಜರಾಗುವಂತೆ ಇನ್ನೊಂದು ನೋಟೀಸ್ ನೀಡಿದರು ಎಂದರೆ ನನಗೆ ಗೊತ್ತಾಗಲಿಲ್ಲ. ನಾನು ಸುನಾವಣೆಗೆ ಹಾಜರಾಗದೇ ಇರುವುದರಿಂದ ದಿನಾಂಕಃ31-10-2018 ರಂದು ರೂ.2,85,285-00 ಗಳನ್ನು ಪಾವತಿಸಬೇಕೆಂದು ಆದೇಶ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ

ತಡವಾಗಿ ಸಿಕ್ಕಿತ್ತು ಎಂದು ನುಡಿಯುತ್ತಾರೆ. ಕಾರ್ಮಿಕ ಇಲಾಖೆಗೆ ನಮ್ಮ ಸಂಸ್ಥೆ ಮುಚ್ಚಿದೆ ಎಂದು ತಿಳಿಸಿದಂತೆ ಇ ಎಸ್ ಐ ಸಂಸ್ಥೆಗೂ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಅದು ಯಾವರೀತಿ ತಿಳಿಸಬೇಕೆಂದು ನನಗೆ ಗೊತ್ತಾಗಲಿಲ್ಲ ಎಂದು ನುಡಿಯುತ್ತಾರೆ. ನಾನು 21-1-2022 ರಂದು ನಿಶಾನೆ ಎ-9 ರಂತೆ ಇ ಎಸ್ ಐ ಸಂಸ್ಥೆಗೆ ಅರ್ಜಿದಾರ ಸಂಸ್ಥೆಯು ಮುಚ್ಚಿದೆ ಎಂದು ತಿಳಿಸಿದ್ದೇನೆ. ನಿಶಾನೆ ಎ-9 ನ್ನು ಈ ಕೇಸು ಹಾಕುವ ಮುಂಚೆ ಈ ಕೇಸಿಗಾಗಿ ಸೃಷ್ಟಿ ಮಾಡಿದ ದಾಖಲೆಯಾಗಿರುತ್ತದೆ ಎಂದರೆ ಸರಿಯಲ್ಲ. ಈಗಲೂ ನಮ್ಮ ಸಂಸ್ಥೆ ನಡೆಯುತ್ತಿದೆ ಆದ್ದರಿಂದ ಬೇರೆ ಇಲಾಖೆಗಳಿಂದ ಅದರ ಲೈಸನ್ಸನ್ನು ಕ್ಯಾನ್ಸಲ್ ಮಾಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ರುಡೋಲ್ಫ್ ಪಿರೇರಾ),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.